## ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಮಂಗಳೂರು

## 2016–17ನೇ ಸಾಲಿನ ಅಂದಾಜು ಅಯವ್ಯಯ ಹಾಗೂ ಸಂಕ್ಷಿಪ್ತ ಕ್ರಿಯಾಯೋಜನೆ (ಯೋಜನಾ ವಿಭಾಗ)

| ಕ್ರ.ಸ. | ಆದಾಯದ ವಿವರ | ಅಂದಾಜು ಜಮಾ ರೂ. | ಯೋಜನಾ ಕಾರ್ಯಕ್ರಮಗಳು | ತಿಂಗಳು | ಸಂಖ್ಯೆ | ಅಂದಾಜುವೆಚ್ಚ ರೂ. | |
|---|---|---|---|---|---|---|---|
| 1 | ಸರ್ಕಾರದಿಂದ ಅನುದಾನ | 66,00,000 | ಕೊಂಕಣಿಯ ನಾಟಕ ಹಾಗೂ ಇತರೆ ತರಬೇತಿ ಶಿಬಿರಗಳು | ಎಪ್ರಿಲ್–16 | 2 | 1,50,000 | ಕೊಂಕಣಿ ರಂಗಭೂಮಿಯಲ್ಲಿ ಆಸಕ್ತರಿರುವ ವಿದ್ಯಾರ್ಥಿಗಳನ್ನು ಅಯ್ಕೆ ಮಾಡಿ ಸದರಿಯವರಿಗೆ ತಜ್ಞ ರಂಗ ಕಲಾಕಾರರಿಂದ ತರಬೇತಿ ನೀಡುವ 10 ದಿನದ ಶಿಬಿರ ಕಾರ್ಯಕ್ರಮ |
| 2 | ಬ್ಯಾಂಕ ಬಡ್ಡಿ ಮತ್ತು ಇತರೆ | 30,000 | ಎಲ್ಲ ಅಕಾಡೆಮಿಗಳ ರಾಜ್ಯ ಮಟ್ಟದ ಸಾಂಸ್ಕೃತಿಕ ಉತ್ಸವ | ಮೇ–16 | 2 | 2,00,000 | ಎಲ್ಲಾ ಅಕಾಡೆಮಿಗಳೊಂದಿಗೆ ಸೇರಿ ವೈವಿಧ್ಯಮಯ ಸಾಂಸ್ಕೃತಿಕ ಸಾಹಿತ್ಯ ಉತ್ಸವ ಕಾರ್ಯಕ್ರಮ ನಡೆಸುವುದು. |
| 3 | ಪುಸ್ತಕ ಮತ್ತು ಸಿ.ಡಿಗಳ ಮಾರಾಟದಿಂದ ಜಮಾ | 2,70,000 | ಕೊಂಕಣಿ ಶೈಕ್ಷಣಿಕ ಜಾಗೃತಿ ಅಭಿಯಾನಗಳು, ತರಬೇತಿ, ಶೈಕ್ಷಣಿಕ ಮಹೋತ್ಸವ, ವಾರ್ಷಿಕ ಸಮಾವೇಶಗಳು | ಎಪ್ರಿಲ್–16<br>ಜೂನ್–16<br>ಜುಲೈ–16<br>ಸೆಪ್ಟೆಂಬರ್–16<br>ನವಂಬರ್–16 | 5 | 8,50,000 | ಕೊಂಕಣಿ ಅಕಾಡೆಮಿಯು ಶಾಲೆಗಳಲ್ಲಿ ಕೊಂಕಣಿ ಕಲಿಕೆಯ ಮುಂದಾಳತ್ವವನ್ನು ವಹಿಸಿ, ಕೊಂಕಣಿ ಕಲಿಕೆ ಬಗ್ಗೆ ಜಾಗೃತಿ ಅಭಿಯಾನ ನಡೆಸಿ ಜನರಲ್ಲಿ ಜಾಗೃತಿ ಮೂಡಿಸಿದರೆ ಕಲಿಕಾ ಪ್ರಮಾಣ ಹೆಚ್ಚಿಸುವ ವ್ಯವಸ್ಥೆ ಮಾಡುವುದು; ಈ ಬಗ್ಗೆ ಶಿಕ್ಷಕರಿಗೆ ತರಬೇತಿ, ಕಾರ್ಯಾಗಾರಗಳನ್ನು ಎರ್ಪಡಿಸುವುದು. ಅದೇ ರೀತಿ ಸರಕಾರವು ಪಿಯು ಮಟ್ಟದಲ್ಲಿ, ಕಾಲೇಜು ಮಟ್ಟದಲ್ಲಿ ಕೊಂಕಣಿ ಕಲಿಕೆಗೆ ಅವಕಾಶ ನೀಡಿ, ಡಿ.ಎಡ್/ಬಿ.ಎಡ್ ಶಿಕ್ಷಣದಲ್ಲಿ ಕೊಂಕಣಿಯನ್ನು ಸೇರ್ಪಡೆಗೊಳಿಸುವುದು. ಪ್ರಸ್ತುತ ಕೊಂಕಣಿ ಕಲಿಸುವ ಶಿಕ್ಷಕರಿಗೆ ಗೌರವ ಸಂಭಾವನೆ ನೀಡುವುದು. ಪಠ್ಯಪುಸ್ತಕಗಳನ್ನು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ವಿದ್ಯಾರ್ಥಿಗಳಿಗೆ ಒದಗಿಸುವುದು. ಕೊಂಕಣಿ ಉಳಿದು ಬೆಳೆಯಲು ಕೊಂಕಣಿ ಶಿಕ್ಷಣ ಅಗತ್ಯವಾದುದರಿಂದ ಅಕಾಡೆಮಿಯು ಈ ಜವಾಬ್ದಾರಿಯನ್ನು ಹೊತ್ತುಕೊಂಡು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುವುದು. |
| 4 | | | ಕೊಂಕಣಿ ಯುವ ಮಹೋತ್ಸವ (ನಾಟಕ–ಸಂಗೀತ–ಜಾನಪದ) | ಜುಲೈ–16 | 1 | 2,00,000 | ಯುವಜನರಲ್ಲಿ ಕೊಂಕಣಿ ಭಾಷೆ, ಸಂಸ್ಕೃತಿ, ಸಾಹಿತ್ಯಗಳಲ್ಲಿ ಅಭಿರುಚಿ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದ ಯುವ ಮಹೋತ್ಸವಗಳನ್ನು ಆಯೋಜಿಸಿ ವಿವಿಧ ಕೊಂಕಣಿ ಸಂಸ್ಕೃತಿಗಳ ಬಗ್ಗೆ ಯುವಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. |
| 5 | | | ಕೊಂಕಣಿ ಮಾನ್ಯತಾ ಮಹೋತ್ಸವ | ಅಗಸ್ಟ್–16 | 2 | 3,00,000 | ಕೊಂಕಣಿಗೆ ಸಂವಿಧಾನದ ಮಾನ್ಯತೆ ದೊರೆತ ಆಗಸ್ಟ್ 20 ನ್ನು ಕೊಂಕಣಿ ಮಾನ್ಯತಾ ದಿನವೆಂದು ನಾಡಿನಾದ್ಯಂತ ಸಂಭ್ರಮಾಚರಣೆಗಳಿಂದ ಆಚರಿಸಲಾಗುತ್ತಿದೆ. ಕೊಂಕಣಿ ಜನರಲ್ಲಿ ಕೊಂಕಣಿ ಬಗ್ಗೆ ಅಭಿಮಾನ ಮೂಡಿಸುವಂತಹ ವಿವಿಧ ಕೊಂಕಣಿ ಸಾಂಸ್ಕೃತಿಕ ಮತ್ತು ಸಾಹಿತಿಕ ಕಾರ್ಯಕ್ರಗಳನ್ನು ಅಕಾಡೆಮಿಯು ಸ್ವತ: ಹಾಗೂ ಸಂಘ ಸಂಸ್ಥೆಗಳ ಸಹಯೋಗದಲ್ಲಿ ನಡೆಸುವುದು. |

| | | | | | | | |
|---|---|---|---|---|---|---|---|
| **6** | | | ಕೊಂಕಣಿ ಮಕ್ಕಳ ಸಮಾವೇಶ | ನವಂಬರ್–16 | 1 | 1,00,000 | ನವಂಬರ್ ತಿಂಗಳಲ್ಲಿ ಮಕ್ಕಳ ದಿನಾಚರಣೆಯ ಪ್ರಯುಕ್ತ ಶಾಲೆಯಲ್ಲಿ ಕೊಂಕಣಿ ಕಲಿಯುವ ವಿದ್ಯಾರ್ಥಿಗಳಿಗಾಗಿ ಮಕ್ಕಳ ದಿನಾಚರಣೆಯನ್ನು ಹಮ್ಮಿಕೊಂಡು ಕೊಂಕಣಿ ಭಾಷೆ, ಸಂಸ್ಕೃತಿ ಬಿಂಬಿಸುವ ವಿವಿಧ ವಿನೋಧವಳಿಗಳ ಕಾರ್ಯಕ್ರಮವನ್ನು ನಡೆಸುವುದು |
| **7** | | | ಗೌರವ ಪ್ರಶಸ್ತಿ ಪ್ರಧಾನ ಮತ್ತು ಪುಸ್ತಕ ಬಹುಮಾನ | ಜನವರಿ–17 | 1 | 12,00,000 | **<u>ಗೌರವ ಪ್ರಶಸ್ತಿ</u>**:2015ನೇ ಸಾಲಿನ ಅಕಾಡೆಮಿಯು ನೀಡುವ ಗೌರವ ಪ್ರಶಸ್ತಿಯಲ್ಲಿ ಮೂರು ಪ್ರಕಾರಗಳ 1. ಕೊಂಕಣಿ ಭಾಷೆ – ಸಾಹಿತ್ಯ, 2. ಕೊಂಕಣಿ ಕಲೆ–ನಾಟಕ/ ಸಂಗೀತ 3. ಕೊಂಕಣಿ ಜನಪದ ಕ್ಷೇತ್ರಗಳಲ್ಲಿ ಅನನ್ಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಪ್ರಶಸ್ತಿಯಲ್ಲಿ ನಗದು ಗೌರವಧನ ರೂ. 50,000/, ಹಾಗೂ ಶಾಲು, ಗಂಧದಹಾರ, ಸ್ಮರಣಿಕೆ, ಪ್ರಮಾಣ ಪತ್ರ ಮತ್ತು ಫಲ ತಾಂಬೂಲ ನೀಡಿ ಗೌರವಿಸಲಾಗುವುದು. ಈ ಸಂದರ್ಭದಲ್ಲಿ ಅಯ್ದ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು.<br>**<u>ಪುಸ್ತಕ ಪುರಸ್ಕಾರ:</u>** 2015ನೇ ಅಕಾಡೆಮಿಯ ಪುಸ್ತಕ ಪುರಸ್ಕಾರಕ್ಕೆ 1.ಕನ್ನಡ–ಕೊಂಕಣಿ ಯಾ ಕೊಂಕಣಿ–ಕನ್ನಡ ಭಾಷಾಂತರ, 2. ಕವನ, 3. ಕಥೆ/ಕಾದಂಬರಿ/ಅಧ್ಯಯನ ಗ್ರಂಥ/ಲೇಖನ ಈ ಮೂರು ಪ್ರಕಾರಗಳನ್ನು ಬಹುಮಾನಕ್ಕೆ ಆಯ್ಕೆಮಾಡಲಾಗುವುದು. ಈ ಪುರಸ್ಕಾರವು ನಗದು ಗೌರವಧನ ರೂ. 25,000/– ಹಾಗೂ ಶಾಲು, ಗಂಧದಹಾರ, ಸ್ಮರಣಿಕೆ, ಪ್ರಮಾಣ ಪತ್ರ ವನ್ನು ಒಳಗೊಂಡಿರುತ್ತದೆ.<br>**<u>ವಾರ್ಷಿಕ ಪ್ರಶಸ್ತಿ:</u>** ಕೊಂಕಣಿಯಲ್ಲಿರುವ ಎಲ್ಲಾ ಕ್ಷೇತ್ರಗಳಲ್ಲಿ ಅವಿರತವಾಗಿ ಕಾರ್ಯನಿರ್ವಹಿಸುತ್ತಿರುವ ಕೊಂಕಣಿಗರ ಸೇವೆಯನ್ನು ಪರಿಶೀಲಿಸಿ, ಆಯ್ಕೆ ಮಾಡಿ ವಾರ್ಷಿಕವಾಗಿ ಅವರನ್ನು ಗುರುತಿಸಿಕೊಂಡು ಪ್ರಶಸ್ತಿ ನೀಡಿ ಗೌರವಿಸುವುದು.<br>ಪ್ರಸ್ತುತ ಸಾಲಿನಲ್ಲಿ ಅಕಾಡೆಮಿಯ ಗೌರವ ಪ್ರಶಸ್ತಿ ಸಮಾರಂಭವನ್ನು ವಿಶಿಷ್ಠ ರೀತಿಯಲ್ಲಿ ನಡೆಸುವ ಉದ್ದೇಶವನ್ನು ಹೊಂದಿದ್ದು, ಈ ಸಮಾರಂಭದ ಪೂರ್ವ ತಯಾರಿಯಾಗಿ ತಿಂಗಳಿಗೊಂದರಂತೆ ಅಯ್ದ ಪ್ರದೇಶದಲ್ಲಿ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. ಜನವರಿ 2017 ರಂದು ಮೂರು ದಿನದ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು. |
| **8** | | | ಹೊರರಾಜ್ಯದಲ್ಲಿ –ಕೊಂಕಣಿ ಸಮಾವೇಶ / ಕೊಂಕಣಿ ಮಹಿಳಾ ಸಮಾವೇಶ | ಜುಲೈ–16 ಅಕ್ಟೋಬರ್–16 | 2 | 4,00,000 | 1.ಕರ್ನಾಟಕ ಮತ್ತು ಗೋವಾ ಕೊಂಕಣಿಗರ ಒಂದು ಸಮಾವೇಶ ಕಾರ್ಯಕ್ರಮವನ್ನು ಗೋವಾದಲ್ಲಿ ನಡೆಸುವುದು<br>2.ಕೊಂಕಣಿ ತುಳು ಈ ಎರಡು ಭಾಷಾ ಕಾರ್ಯಕ್ರಮವನ್ನು ದೆಹಲಿಯಲ್ಲಿರುವ ಕೊಂಕಣಿ ತುಳು ಸಂಘ ಸಂಸ್ಥೆಗಳ ಸಹಕಾರದಲ್ಲಿ ನಡೆಸುವುದು. |

| | | | | | | | |
|---|---|---|---|---|---|---|---|
| **9** | | | ಕೊಂಕಣಿ ಸಾಹಿತ್ಯ ಸಮ್ಮೇಳನ | ಡಿಸೆಂಬರ್–16 | 1 | 3,00,000 | ಕೊಂಕಣಿಯಲ್ಲಿರುವ ವಿವಿಧ ಸಮುದಾಯದವರ ಭಾಷೆ ಮತ್ತು ಸಾಹಿತ್ಯಗಳಿಗೆ ಪ್ರೊತ್ಸಾಹಿಸುವ ಹಿನ್ನೆಲೆಯಲ್ಲಿ ಎಲ್ಲಾ ಸಾಹಿತಿಗಳನ್ನು ಒಂದೆಡೆ ಸೇರಿಸಿ ಪರಸ್ಪರ ಸಾಹಿತ್ಯಾತ್ಮಕ ಮತ್ತು ವಿಮರಾಶಾತ್ಮಕ ವಿಚಾರಗೋಷ್ಠಿ, ಕವಿಗೋಷ್ಠಿ ಹಾಗೂ ಸಂವಾದ ಕಾರ್ಯಕ್ರಮಗಳನ್ನೊಳಗೊಂಡಾ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳುವುದು. |
| **10** | | | ಕಾರ್ಯಕ್ರಮಗಳ ಪ್ರಾಯೋಜನೆ | ವರ್ಷವಾರು | 20 | 6,00,000 | ರಾಜ್ಯದಲ್ಲಿರುವ ಕೊಂಕಣಿ ಸಂಘ ಸಂಸ್ಥೆಗಳು ತಾವು ನಡೆಸುತ್ತಿರುವ ಕೊಂಕಣಿ ಕಾರ್ಯಕ್ರಮಗಳಿಗೆ ಅಕಾಡೆಮಿಯಿಂದ ಆರ್ಥಿಕ ಸಹಾಯಕೋರಿವ ಅವಕಾಶಗಳು ಹೆಚ್ಚಾಗಿದ್ದು, ಅವುಗಳಿಗೆ ಸ್ಪಂದಿಸಿ, ಕೊಂಕಣಿ ಭಾಷೆ ಸಾಹಿತ್ಯ ಸಂಸ್ಕೃತಿಗಳಿಗೆ ಪ್ರೋತ್ಸಾಹಿಸುವ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ಪ್ರಾಯೋಜಿಸುವುದು. |
| **11** | | | ಅಕಾಡೆಮಿ ಪುಸ್ತಕ ಪ್ರಕಟಣೆಗಳು / ವಾರ್ತಾಸಂಚಿಕೆ ಪ್ರಕಟಣೆ | ವರ್ಷವಾರು | 25+4 | 6,00,000 | ಕೊಂಕಣಿ ಭಾಷೆಯಲ್ಲಿ ವಿವಿಧ ಸಾಹಿತ್ಯವನ್ನು ಬರೆದು, ಮುದ್ರಣಕ್ಕೆ ಅನಾನುಕೂಲತೆ ಹೊಂದಿರುವ ಸಾಹಿತಿಲೇಖಕರ ಪುಸ್ತಕಗಳನ್ನು ಅಕಾಡೆಮಿಯೇ ಪ್ರಕಟಿಸಿ, ಸಾಹಿತಿ ಲೇಖಕರಿಗೆ ಪ್ರೋತ್ಸಾಹಿಸುವ ಯೋಜನೆಯನ್ನು ಹಾಕಲಾಗಿದೆ. |
| **12** | | | ಕೊಂಕಣಿ ಪುಸ್ತಕ ಮತ್ತು ಸಿ.ಡಿ. ಖರೀದಿಗಳು | ವರ್ಷವಾರು | 30 | 1,00,000 | ಕೊಂಕಣಿ ಅಕಾಡೆಮಿಯು ಕೇವಲ 2000/– ರೂಪಾಯಿಗಳ ಪುಸ್ತಕ/ಸಿಡಿಯ ಖರೀದಿ ಮಾಡುತ್ತಿದೆ. ಈ ಮೊತ್ತವನ್ನು ರೂ. 10,000/– ಹೆಚ್ಚಿಸಿ ಬರಹಗಾರರನ್ನು, ಸಂಗೀತಗಾರರನ್ನು ಪ್ರೋತ್ಸಾಹಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಈ ಯೋಜನೆಯಲ್ಲಿ ಖರೀದಿಸಿದ ಪುಸ್ತಕ ಮತ್ತು ಸಿ.ಡಿ.ಗಳನ್ನು ಕೊಂಕಣಿ ಮೊಬೈಲ್ ಬಜಾರ್ ಮುಖಾಂತರ ರಿಯಾಯತಿ ದರದಲ್ಲಿ ಜನರಿಗೆ ತಲುಪಿಸುವ ವ್ಯವಸ್ಥೆಯನ್ನು ಮಾಡುವ ಯೋಜನೆ ಹಾಕಲಾಗಿದೆ. |
| **13** | | | ವಾಚನಾಲಯ ಅಭಿವೃದ್ಧಿ ಯೋಜನೆ/ಕಛೇರಿ ಸೌಂದರ್ಯೀಕರಣ | – | – | 2,00,000 | ವಾಚನಾಯಲಯ ಅಭಿವೃದ್ಧಿಪಡಿಸುವುದು, ಕಛೇರಿ ಸೌಂದರ್ಯೀಕರಣ ಹಾಗೂ ಕಚೇರಿಗೆ ಅಗತ್ಯ ಪೀಠೋಪಕರಣಗಳ ಖರೀದಿಸುವುದು. |
| **14** | | | ಕೊಂಕಣಿ ಮೊಬೈಲ್ ಬಜಾರ್ ಯೋಜನೆ(ನಿರ್ವಹಣ ವೆಚ್ಚ ) | ವರ್ಷವಾರು | – | 5,00,000 | ಪುಸ್ತಕಗಳು ಪ್ರಕಟವಾಗುತ್ತಿವೆ ಆದರೆ ಇಂದಿನ ಡಿಜಿಟಲ್ ಯುಗದಲ್ಲಿ ಓದುಗರ ಪ್ರಮಾಣ ಇಳಿಮುಖವಾಗಿದೆ. ಕೊಂಕಣಿಯಲ್ಲಿ ವ್ಯವಸ್ಥಿತ ಪುಸ್ತಕ ಮಾರುಕಟ್ಟೆಯ ಕೊರತೆಯಿದೆ. ಅಕಾಡೆಮಿಯ ನೇತೃತ್ವದಲ್ಲಿ 'ಮೊಬೈಲ್ ಕೊಂಕಣಿ ಬಜಾರ್' ಎಂಬ ವಿನೂತನ ಸಂಚಾರಿ ಗ್ರಂಥಾಲಯ ಮತ್ತು ಪುಸ್ತಕ ಮಾರಾಟ ವ್ಯವಸ್ಥೆ ಮಾಡುವುದು. ಇದಕ್ಕಾಗಿ ಚಾಲಕ ನಿರ್ವಾಹಕರೊಡಗೂಡಿದ ಒಂದು ವಾಹನದಲ್ಲಿ ಜನರು ಸೇರುವ ಕಡೆ ಹೋಗಿ, ಪುಸ್ತಕಗಳನ್ನು ಧ್ವನಿಸುರುಳಿಗಳನ್ನು ಮಾರಾಟ ಮಾಡುವುದು. ಇದರಿಂದ ಪ್ರಕಟವಾದ ಉತ್ತಮ ಸಾಹಿತ್ಯ ಕೇವಲ |

| | | | | | | | |
|---|---|---|---|---|---|---|---|
| | | | | | | | ನಗರ ಕೇಂದ್ರಿತ ಮಾರುಕಟ್ಟೆಯಲ್ಲಿ ಉಳಿಯದೇ, ಹಳ್ಳಿಹಳ್ಳಿಗೂ ತಲುಪುವ ವ್ಯವಸ್ಥೆಯಾಗುತ್ತದೆ. ಈ ಯೋಜನೆಯನ್ನು ಅಕಾಡೆಮಿಯು ಹಮ್ಮಿಕೊಂಡಿದೆ. |
| **15** | | | ಕೊಂಕಣಿ ಫೆಲೋಶಿಪ್ ಯೋಜನೆಗಳು /ಸಾಕ್ಷ್ಯಚಿತ್ರ ಯೋಜನೆಗಳು | ವರ್ಷವಾರು | 4 | 4,00,000 | ಕೊಂಕಣಿಯಲ್ಲಿ ಹಲವು ಸಮುದಾಯಗಳಿದ್ದು, ಅವುಗಳ ಸಮಗ್ರ ಮಾಹಿತಿ ವಿವರಗಳನ್ನೊಳಗೊಂಡ ಅಧ್ಯಯನ ಮತ್ತು ದಾಖಲೀಕರಣ ವ್ಯವಸ್ಥೆಯ ಫೆಲೋಶಿಫ್ ಯೋಜನೆ |
| **16** | | | ಕಾರ್ಯಗಳ ಅನುಷ್ಠಾನ ಸಾಮಾನ್ಯ ವೆಚ್ಚಗಳು | ವರ್ಷವಾರು | – | 8,00,000 | 1. ತಾತ್ಕಾಲಿಕಾ ಸಿಬ್ಬಂಧಿಗಳ ಸಂಭಾವನೆಗಳು<br>2. ಕಚೇರಿ ಸಾಮಾಗ್ರಿ, ಅಂಚೆ ಕೊರಿಯರ್, ಅತಿಥಿಸತ್ಕಾರ, ವಾರ್ತಾಪತ್ರಿಕೆ, ಇಂಟರ್ ನೆಟ್, ವೆಬ್ ಸೈಟ್, ಗಣಕಯಂತ್ರಗಳ ನಿರ್ವಹಣೆ ,ಜನರೇಟರ್,ಎ.ಸಿ.ನಿರ್ವಹಣೆ, ಕವರ್ಸ್, ಲೇಟರ್ ಹೆಡ್ಸ್ ಮುದ್ರಣ. ರಬ್ಬರ್ ಸ್ಟ್ಯಾಂಪ್ ಲೇಖನಾ ಸಾಮಾಗ್ರಿಗಳು ಮತ್ತು ಕಛೇರಿ ಖರ್ಚುಗಳು<br>3. ಸ್ಥಾಯಿ ಸಮಿತಿ, ಸಾಮಾನ್ಯ ಸಭೆಗಳ ವೆಚ್ಚ, ಸದಸ್ಯರ ಪ್ರಯಾಣ ಭತ್ಯೆ, ಸಭಾ ಭತ್ಯೆ ಇತ್ಯಾದಿ<br>4. ಕಾರ್ಯಕ್ರಮಗಳಿಗೆ ಅಧ್ಯಕ್ಷರು ಮತ್ತು ತಂಡದ ವಾಹನ ಬಾಡಿಗೆ, ವಸತಿ ವೆಚ್ಚ |
| | | **69,00,000** | **ಒಟ್ಟು ಯೋಜನಾ ಬಜೆಟ್ ಮೊತ್ತ** | | | **69,00,000** | |

**ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ**

**2016–17ನೇ ಸಾಲಿನ ಯೋಜನೇತರ ಕ್ರಿಯಾಯೋಜನೆ ಮಾಹಿತಿ ವಿವರಗಳು**

| ಕ್ರ.ಸ. | ಆದಾಯದ ವಿವರ | ಅಂದಾಜು ಜಮಾ | ವೆಚ್ಚಗಳ ವಿವರ | ಅಂದಾಜು ವೆಚ್ಚ |
|---|---|---|---|---|
| 1 | ಸರ್ಕಾರದಿಂದ ಅನುದಾನ | 10,00,000.00 | ಕಛೇರಿ ಬಾಡಿಗೆ | 1,70,000 |
| | | | ಅಧ್ಯಕ್ಷರ ಸಂಭಾವನೆ, ಪ್ರವಾಸ ವೆಚ್ಚ, ದೂರವಾಣಿ ಶುಲ್ಕ | 4,00,000 |
| 3 | | | ಆಡಳಿತಾತ್ಮಕ ವೆಚ್ಚಗಳು : ಅಧಿಕಾರಿಗಳ ಪ್ರಯಾಣ ವೆಚ್ಚ, ದಿನ ಭತ್ಯೆ, ಕಚೇರಿ ನಿರ್ವಹಣೆ | 4,30,000 |
| | | 10,00,000 | **ಯೋಜನೇತರ ಬಜೆಟ್ ಮೊತ್ತ** | 10,00,000 |